ಸರಿಯಾಗಿ ಕಟ್ಟಲಾಗುತ್ತಿಲ್ಲವಂತೆ. ಫೈನಾನ್ಸಿನ ವಸೂಲಿ ಏಜೆಂಟರು ಒಂದೆರಡು ಬಾರಿ ಮನೆಗೆ ಬಂದು, ಧಮಕಿ ಹಾಕಿ ಹೋಗಿದ್ದಾರಂತೆ. ಮನೆಯನ್ನು ಹರಾಜು ಹಾಕುವುದಾಗಿ, ಒಂದೆರಡು ಬಾರಿ, ತಗಾದೆ ನೋಟಿಸುಗಳು ಬಂದಿವೆಯಂತೆ.

"ಅದು ಬಹಳ ಒಳ್ಳೆಯದಾಯಿತು, ಬೋಪಯ್ಯ. ನಾವೀಗ ಫೈನಾನ್ಸಿನ ಪರವಾಗಿ ಮನೆ ಖರೀದಿಗೆ ಬಂದವರಂತೆ ಭೇಟಿ ನೀಡ್ತೇವೆ. ಇವತ್ತು ಸಂಜೆಯೊಳಗೆ ನೀವು ಮನೆ ಖಾಲಿ ಮಾಡ್ಬೇಕು!" ಬಿರುದನಿಯಲ್ಲಿ ಹೇಳಿದ ಕರಮಚಂದ. ಬೋಪಯ್ಯ ಸೂರು ಬಿರಿಯುವಂತೆ ನಕ್ಕ.

★★★

ಬೋಪಯ್ಯನ ಮನೆ ಹಳೆಯ ವಿನ್ಯಾಸದ ಒಂದು ಅಂತಸ್ತಿನ ಕಟ್ಟಡ. ಸುಣ್ಣಬಣ್ಣ ಕಾಣದೆ, ಅಂದಗೆಟ್ಟಿದ್ದರೂ, ಮಜಬೂತಾಗಿತ್ತು. ನಾವು ಗೇಟು ತೆರೆದು, ಒಳ ಹೊಕ್ಕುವಾಗ ವ್ಯಕ್ತಿಯೊಬ್ಬ ಆತುರಾತುರವಾಗಿ, ಮನೆಯೊಳಗಿನಿಂದ ಬಂದು, ನಮ್ಮನ್ನು ಲೆಕ್ಕಿಸದೆ, ಗೇಟು ತೆರೆದು ಧಾವಿಸಿ ಹೋದ. ಅವನು ಹೋದ ದಿಕ್ಕಿನೆಡೆ ಒಮ್ಮೆಗೆ ಅನುಮಾನಸ್ಪದ ನೋಟ ಬೀರಿದ ಬೋಪಯ್ಯ ಪದ ಜೋಡಿಸಿದ,

"ಇವ್ನು ಎರಡನೆಯವನು. ಮಹೇಶ."

ನಾವು ಒಳ ಪ್ರವೇಶಿಸುತ್ತಿದ್ದಂತೆ, ಹಜಾರದಲ್ಲಿ ಮಲಗಿಕೊಂಡು ಟೀವಿಯಲ್ಲಿ ಯಾವುದೋ ಸಿನಿಮಾ ನೋಡುತ್ತಿದ್ದ ಯುವಕನೊಬ್ಬ ಕತ್ತು ಹೊರಳಿಸಿ ನಮ್ಮತ್ತ ಕುತೂಹಲದ ದೃಷ್ಟಿ ಬೀರಿದ.

"ಚಿನ್ನಪ್ಪ, ಇವ್ರು ಮನೆ ಖರೀದಿಗೆ ಬಂದಿದ್ದಾರೆ. ಫೈನಾನ್ಸಿನವರು ಕಳಿಸಿದ್ದು." ಬೋಪಯ್ಯ ಘೋಷಿಸಿದ.

"ಅವ್ರಿಗೆ ಅಷ್ಟೇನು ಅರ್ಜೆಂಟು? ನಾವೇನು ಓಡಿ ಹೋಗ್ತೀವಾ? ಮುಠ್ಠಾಳರು!" ಕರ್ಕಶವಾಗಿ ಅರಚಿದ ಚಿನ್ನಪ್ಪ.

"ಇವತ್ತು ಸಂಜೆನೇ ಮನೆ ಖಾಲಿ ಮಾಡ್ಬೇಕಾಗಬಹುದು." ಚಿಂತಿತನಂತೆ ಮರು ನುಡಿದ ಬೋಪಯ್ಯ.

"ಮತ್ತೆ ನಾವೆಲ್ಲಿಗೆ ಹೋಗೋದು? ನೀವ್ಯಾಕೆ ಅದಿಕ್ಕೆ ಒಪ್ಕೊಂಡಿದ್ದು?" ಒರಟು ಪ್ರಶ್ನೆ ಬಂತು.

"ನಮ್ಗೆ ತುಸು ತುರ್ತು ಇದೆ. ತಕ್ಷಣ ನಮ್ಗೆ ಇದೇ ವಠಾರದಲ್ಲಿ ಮನೆ ಬೇಕು. ಆದರೆ, ನಿಮ್ಗೆ ತೊಂದರೆ ಕೊಡೋದಿಲ್ಲ. ನಮ್ ಪರಿಚಯದವರ ಮನೆಯೊಂದು ಬಾಡಿಗೆಗೆ ಇದೆ. ಅಲ್ಲಿ ಇರಬಹುದು. ಒಂದು ತಿಂಗಳ ಬಾಡಿಗೆ ನಾನೇ ಕೊಡ್ತೀನಿ."

ಹಾಗೆಂದು ಹೇಳಿ, ಕರಮಚಂದ ಮನೆಯನ್ನು ಪರಿಶೀಲಿಸಲು ತೊಡಗಿದ. ಬೋಪಯ್ಯ ಮನೆಯನ್ನು ತೋರಿಸಲು ನಮ್ಮನ್ನು ಕರೆದೊಯ್ದ.

"ಇದು ನನ್ನ ಕೊಠಡಿ." ಎಂದು ಬೀಗ ತೆರೆಯಲು ಸನ್ನದ್ಧನಾದ ಬೋಪಯ್ಯನಿಗೆ ತಡೆಯುವಂತೆ ಸೂಚನೆ ನೀಡಿದ ಕರಮಚಂದ, ಬಾಗಿಲನ್ನು ಸೂಕ್ಷ್ಮವಾಗಿ ಪರಿಶೀಲಿಸಿದ. ನಂತರ ತೃಪ್ತಿಯಾದವನಂತೆ, ಬೋಪಯ್ಯನಿಗೆ ಬೀಗ ತೆಗೆಯಲು ಹೇಳಿದ.

ಬೆನ್ನ ಹಿಂದೆ ಕದ ಎಳೆದ, ಬೋಪಯ್ಯ ತಗ್ಗಿದ ದನಿಯಲ್ಲಿ ಉಸುರಿದ,

"ಇಲ್ನೋಡಿ, ಇದೇ ಮರದ ಪೆಟ್ಟಿಗೆ. ಇದರ ಅಡಿಯಲ್ಲಿ ತಿಜೋರಿ ಇರೋದು."

ಕರಮಚಂದ ಏಕಾಗ್ರತೆಯಿಂದ ಪೆಟ್ಟಿಗೆಯನ್ನು ಪರೀಕ್ಷಿಸಿದ. ಮತ್ತೆ ಮೆಲ್ಲಗೆ ಅದನ್ನು ಸರಿಸಿದ. ಮೇಲು ನೋಟಕ್ಕೆ ಏನೂ ಕಾಣಿಸದಿದ್ದರೂ, ಸೂಕ್ಷ್ಮವಾಗಿ ನೋಡಿದಾಗ, ಮೊಳೆಯಂತೆ ತೋರುವ ಪುಟ್ಟ ಹಿಡಿಕೆಯೊಂದು ಗೋಚರಿಸಿತು. ಅದನ್ನು ಬದಿಗೆ ಸರಿಸಿದಾಗ, ನೆಲದ ಹಾಸು ನಿಧಾನವಾಗಿ ಮೇಲಕ್ಕೆ ಚಿಮ್ಮಿತು. ಅದರ ಅಡಿಯಲ್ಲಿ ನೆಲದಲ್ಲಿ ಹೂತಿದ್ದ ತಿಜೋರಿ ಕಾಣಿಸಿತು. ಅದರ ಮೇಲೆಲ್ಲಾ